# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ :13–08–2021

(ದಿನಾಂಕ:14–07–2021ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದುವರೆದ ಭಾಗ)


**ಪ್ರಾಧಿಕಾರಗಳ ವಿಭಾಗ**

**ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451**

**ಶಿವಮೊಗ್ಗ ಜಿಲ್ಲೆ.**

ಫ್ಯಾಕ್ಸ್: 08282-256262
ಇ-ಮೇಲ್ :drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್ ಸೈಟ್ :www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-I:13(5)-20/198 :2021-22 ದಿನಾಂಕ:14-09-2021 15

ಮಾನ್ಯರೆ,

ವಿಷಯ: ದಿನಾಂಕ:13-08-2021ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-III ರ ಪ್ರಕರಣ- 16 ರನ್ವಯ ದಿನಾಂಕ:13-08-2021 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಕಾರ್ಯಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು: ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

PROCEEDINGS COVE LETTER-2021

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:13–08–2021ರಂದು ಶುಕ್ರವಾರ (ದಿನಾಂಕ:14–07–2021ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದುವರೆದ ಭಾಗ) ಪೂರ್ವಾಹ್ನ 10.00 ಗಂಟೆಗೆ ವಿಶ್ವವಿದ್ಯಾಲಯದ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ"ದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | |
|---|---|
| 1. ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. ಪ್ರೊ. ಸಿ.ಎಂ. ತ್ಯಾಗರಾಜ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. ಡಾ. ಅಶೋಕ್ ಡಿ.ರೇವಣ್‌ಕರ್, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 7. ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 8. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 9. ಶ್ರೀ ಧರ್ಮ ಪ್ರಸಾದ್ ಜೆ. | ಸದಸ್ಯರು |
| 10. ಪ್ರೊ. ಕೃಷ್ಣ ವಿ., ಪ್ರಾಧ್ಯಾಪಕರು | ಸದಸ್ಯರು |
| 11. ಡಾ. ಗೀತಾ ಸಿ., ಪ್ರಾಧ್ಯಾಪಕರು | ಸದಸ್ಯರು |
| 12. ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. ಡಾ. ಯುವರಾಜ ಬಿ. ಹೆಚ್. ಪ್ರಾಂಶುಪಾಲರು | ಸದಸ್ಯರು |
| 14. ಡಾ. ಹೆಚ್. ರಾಜೇಶ್ವರಿ, ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

1) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4) ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5) ಶ್ರೀ ಎನ್. ಆರ್. ಮಂಜುನಾಥ
6) ಶ್ರೀ ರಾಮಲಿಂಗಪ್ಪ ಹೆಚ್.

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಪತಿಯವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮುಂದುವರೆದು ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯಕ್ಕೆ ನೂತನ ಕುಲಸಚಿವರಾಗಿ ನೇಮಕಗೊಂಡಿರುವ ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ), ಇವರಿಗೆ ಹಾಗೂ ಕುಲಸಚಿವ(ಪರೀಕ್ಷಾಂಗ)ರಾಗಿ ನೇಮಕಗೊಂಡಿರುವ ಪ್ರೊ. ತ್ಯಾಗರಾಜ ಸಿ.ಎಂ. ಹಾಗೂ ನೂತನವಾಗಿ ಜಂಟಿ ನಿರ್ದೇಶಕರಾಗಿ ನಿಯೋಜನೆಗೊಂಡಿರುವ ಡಾ. ಅಶೋಕ್ ಡಿ. ರೇವಣ್‌ಕರ್. ಇವರಿಗೆ ಸಭೆಗೆ ಆತ್ಮೀಯವಾಗಿ ಸ್ವಾಗತ ಕೋರಿದರು.

ನಂತರ ಮಾನ್ಯ ಕುಲಪತಿಗಳು ತಮ್ಮ ಪ್ರಾಸ್ತಾವಿಕ ನುಡಿಯನ್ನು ಮುಂದುವರೆಸುತ್ತಾ, ವಿಶ್ವವಿದ್ಯಾಲಯವು ತಮ್ಮೆಲ್ಲರ ಸಹಕಾರದಿಂದ ನ್ಯಾಕ್‌ನಲ್ಲಿ 'ಎ' ಶ್ರೇಣಿ, ಎನ್.ಐ.ಆರ್.ಎಫ್. ನಲ್ಲಿ 73ನೇ ಸ್ಥಾನ, ಸಿಮ್ಯಾಗೋ ರ್‍ಯಾಂಕಿಂಗ್ ನಲ್ಲಿ 56ನೇ ಸ್ಥಾನ ಹಾಗೂ ಕೆಎಸ್‌ಯುಆರ್‌ಎಫ್ ನಲ್ಲಿ ಮೂರು ಸ್ಟಾರ್ ಪಡೆಯಲು ಸಾಧ್ಯವಾಯಿತು. ಮುಂದೆಯೂ ಸಹ

ವಿಶ್ವವಿದ್ಯಾಲಯದೊಂದಿಗೆ ಇದೇ ರೀತಿ ಸಹಕರಿಸಿ ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೋತ್ಸಾಹಿಸಬೇಕೆಂದು ಎಲ್ಲಾ ಸದಸ್ಯರಲ್ಲಿ ವಿನಂತಿಸಿದರು. ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಲು ಖಾಲಿಯಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವುದು ತುಂಬಾ ಅಗತ್ಯವಾಗಿದ್ದು, ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಕೋರಲಾಗುವುದು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

ಮಾನ್ಯ ಕುಲಸಚಿವರು ಮಾತನಾಡಿ ದಿನಾಂಕ:14–07–2021ರಂದು ನಡೆದ ಸಿಂಡಿಕೇಟ್ ಸಭೆಯ ಮುಂದೂಡಿದ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಗುವುದು. ಅಜೆಂಡಾ ಮುಗಿದ ನಂತರ ಇತರೆ ವಿಷಯಗಳಿದ್ದಲ್ಲಿ ಚರ್ಚಿಸಬಹುದು ಎಂದು ತಿಳಿಸಿದರು.

ಅದರಂತೆ ಮುಂದೂಡಿದ ಸಭೆಯ ಕಾರ್ಯ ಸೂಚಿಯನ್ವಯ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

**ದಿನಾಂಕ:13–08–2021ರ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯಗಳು. (ದಿನಾಂಕ:14–07–2021 ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಲ್ಪಟ್ಟ ವಿಷಯ)**

## ಪ್ರಾಧಿಕಾರಗಳ ವಿಭಾಗ

**2021–ಸಿಂ–3.01:** ದಿನಾಂಕ:24–03–2021 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

ಚರ್ಚೆ: ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜೆ. – ಇವರು ಮಾತನಾಡುತ್ತಾ ನಡಾವಳಿಯ ಪುಟ ಸಂಖ್ಯೆ 13ರಲ್ಲಿ 2021ನೇ ಶೈಕ್ಷಣಿಕ ಸಾಲಿನಿಂದ ದೂರ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಆನ್‌ಲೈನ್ ಪದವಿ ಶಿಕ್ಷಣ ಪ್ರಕ್ರಿಯೆ ಕೈಗೊಳ್ಳಲು ಟೆಂಡರ್ ಪಡೆದುಕೊಂಡ ಸಂಸ್ಥೆಗೆ ಅನುಮೋದನೆ ನೀಡುವುದರ ಜೊತೆಯಲ್ಲಿ, ದೂರ ಶಿಕ್ಷಣ ಪರೀಕ್ಷೆಗಳನ್ನು ನಡೆಸುವ ಸಂದರ್ಭದಲ್ಲಿ ನಿಯಮಾನುಸಾರ ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯ ಇರುವ ಕುರಿತು ಹಾಗೂ ಪರೀಕ್ಷೆಗೆ ಸ್ಥಳಾವಕಾಶ, ಕೊಠಡಿಗಳ ಸಂಖ್ಯೆ, ಕುರ್ಚಿ ಟೇಬಲ್‌ಗಳ ಲಭ್ಯತೆ ಹಾಗೂ ಸಿ.ಸಿ. ಟಿವಿ ಅಳವಡಿಕೆ ಇರುವ ಬಗ್ಗೆ ಪರಿಶೀಲಿಸಿ ಅನುಮೋದನೆ ನೀಡಬೇಕೆಂದು ತಿಳಿಸಿದರು ಹಾಗೂ ಪರೀಕ್ಷಾ ಕೇಂದ್ರಗಳ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಬೇಕು ಎಂಬುದನ್ನು ನಡಾವಳಿಗಳಲ್ಲಿ ಸೇರ್ಪಡೆಗೊಳಿಸಬೇಕೆಂದು ಕೋರಿದರು.

ನಿರ್ಣಯ: ಚರ್ಚೆಯ ನಂತರ ದಿನಾಂಕ:24–03–2021 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳಲ್ಲಿನ ದೂರ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಆನ್ ಲೈನ್ ಪದವಿ ಶಿಕ್ಷಣ ಪ್ರಕ್ರಿಯೆ ಕೈಗೊಳ್ಳಲು ಟೆಂಡರ್ ಪಡೆದುಕೊಂಡ ಸಂಸ್ಥೆಗೆ ಅನುಮೋದನೆ ನೀಡುವುದರ ಕುರಿತ ನಿರ್ಣಯದಲ್ಲಿ ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜೆ. – ಇವರು ನೀಡಿದ ಅಭಿಪ್ರಾಯವನ್ನು ಸೇರ್ಪಡೆಗೊಳಿಸಿ ಉಳಿದಂತೆ ನಡಾವಳಿಯನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

**2021–ಸಿಂ–3.02:** ಸ್ನಾತಕ ಮತ್ತು ಸ್ನಾತಕೋತ್ತರ (ಸಂಯುಕ್ತ) ಹಿಂದಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ಚರ್ಚೆ: ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು ಪ್ರಸ್ತುತ ಹಿಂದಿ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ. ಬಿ.ಎಸ್. ಗುಂಜಾಲ್, ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜ ಕಾರ್ಯ ಅಧ್ಯಯನ ವಿಭಾಗ, ಇವರು ವಯೋ ನಿವೃತ್ತರಾಗಿರುವುದರಿಂದ ಅವರನ್ನು ಹೊರತುಪಡಿಸಿ ಬೇರೆಯವರನ್ನು ನೇಮಕ ಮಾಡಬೇಕಾಗಿರುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತಂದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಸ್ನಾತಕ ಮತ್ತು ಸ್ನಾತಕೋತ್ತರ (ಸಂಯುಕ್ತ) ಹಿಂದಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು. ಹಾಗೂ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021–ಸಿಂ–3.03:**"STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY" ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ:"STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY" ಪರಿನಿಯಮವನ್ನು ಪರಿನಿಯಮಗಳ ಸ್ಥಾಯಿಸಮಿತಿಯ ಗಮನಕ್ಕೆ ತಂದಿರುವುದಿಲ್ಲ ಎಂದು ಪರಿನಿಯಮಗಳ ಸ್ಥಾಯಿಸಮಿತಿಯ ಅಧ್ಯಕ್ಷರಾದ ಪ್ರೊ. ವಿ. ಕೃಷ್ಣ ಇವರು ತಿಳಿಸಿದ್ದರಿಂದ ಸದರಿ ಸಮಿತಿಯಲ್ಲಿ ಮಂಡಿಸಿ ಅನುಮೋದನೆಯಾದ ನಂತರ ಸಿಂಡಿಕೇಟ್‌ಗೆ ಮಂಡಿಸಲು ಸೂಚಿಸಲಾಯಿತು.

**2021–ಸಿಂ–3.03(ಎ):**ಸ್ನಾತಕೋತ್ತರ ಮನಃಶಾಸ್ತ್ರ ಪಿ.ಜಿ. ಡಿಪ್ಲೋಮಾ ಇನ್ ಕೌನ್ಸಿಲಿಂಗ್ (ಸಂಯುಕ್ತ) ಅಧ್ಯಯನ ಮಂಡಳಿಯನ್ನು ರಚಿಸಿರುವುದನ್ನು ಸ್ಥಿರೀಕರಿಸುವ ಬಗ್ಗೆ.

ನಿರ್ಣಯ:ಸ್ನಾತಕೋತ್ತರ ಮನಃಶಾಸ್ತ್ರ ಪಿ.ಜಿ. ಡಿಪ್ಲೋಮಾ ಇನ್ ಕೌನ್ಸಿಲಿಂಗ್ (ಸಂಯುಕ್ತ) ಅಧ್ಯಯನ ಮಂಡಳಿಯನ್ನು ರಚಿಸಿರುವುದನ್ನು ಸಭೆಯು ಸ್ಥಿರೀಕರಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2021–ಸಿಂ–3.04:**ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ಲಾಕ್‌ಡೌನ್ ಸಮಯದಲ್ಲಿ ಕಾರ್ಯ ನಿರ್ವಹಿಸಿರುವುದಕ್ಕಾಗಿ ಪ್ರೋತ್ಸಾಹ ಧನ ಮಂಜೂರು ಮಾಡುವ ಕುರಿತು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಕೋವಿಡ್–19 ಕಾರಣದಿಂದ ಉಂಟಾದ ಲಾಕ್‌ಡೌನ್ ಸಮಯದಲ್ಲಿ ನಿರಂತರವಾಗಿ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಿದ ಸಿಬ್ಬಂದಿಗಳಿಗೆ ಸರ್ಕಾರದ ಆದೇಶ/ ವೈದ್ಯಕೀಯ ಇಲಾಖೆಯ ಆದೇಶದಂತೆ one time ಪ್ರೋತ್ಸಾಹ ಧನ ಮಂಜೂರು ಮಾಡಲು ನಿರ್ಣಯಿಸಲಾಯಿತು.

**2021–ಸಿಂ–3.05:** ಹೆಸರು ಬದಲಾವಣೆಗೆ ಅನುಮತಿ ನೀಡುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಪ್ರಭಾಕರ್ ಇವರು ತಮ್ಮ ಹೆಸರನ್ನು ಪ್ರಭಾಕರ್ ಚವ್ಹಾಣ ಎಂದು ಬದಲಾವಣೆ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

**2021–ಸಿಂ–3.06:**ಸರ್ಕಾರದಿಂದ ಅನುಮತಿಸಲ್ಪಟ್ಟಿರುವ ಬೋಧಕ / ಬೋಧಕೇತರ ಹುದ್ದೆಗಳನ್ನು ಮರುಹಂಚಿಕೆ (Redeployment) ಮಾಡಿಕೊಳ್ಳುವ ಕುರಿತು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಅಧ್ಯಾಪಕರುಗಳ ಲಭ್ಯತೆಗನುಗುಣವಾಗಿ ಹುದ್ದೆಗಳನ್ನು ಮರುಹಂಚಿಕೆ ಮಾಡಲು ಕುಲಸಚಿವರು ಮತ್ತು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. ಹಾಗೂ ಹೆಚ್ಚುವರಿಯಾಗಿ 27 ಬೋಧಕ ಹುದ್ದೆಗಳ ಮಂಜೂರಾತಿಗಾಗಿ ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

**2021–ಸಿಂ–3.06(ಬಿ):**ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

ಚರ್ಚೆ: ಕುಲಸಚಿವರು ಮಾತನಾಡಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನು ಸ್ಥಿರೀಕರಣಕ್ಕಾಗಿ ಸಭೆಗೆ ಮಂಡಿಸಿದೆ ಎಂದರು. ಕೆಲವು ಸದಸ್ಯರು ಹಿಂದಿ ವಿಭಾಗವನ್ನು ಶಿವಮೊಗ್ಗದ ಸಹ್ಯಾದ್ರಿ ಕಾಲೇಜು ಆವರಣಕ್ಕೆ ಸ್ಥಳಾಂತರಿಸುವಂತೆ ಆಗ್ರಹಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸಲಾಯಿತು.

**2021–ಸಿಂ–3.06(ಸಿ):** ಶ್ರೀ ರಮೇಶ್, ಕಿರಿಯ ಸಹಾಯಕರು–ಇವರನ್ನು ಸೇವೆಯಲ್ಲಿ ಮುಂದುವರೆಸಿರುವ ಕುರಿತು.

**ನಿರ್ಣಯ:** ಶ್ರೀ ರಮೇಶ್, ಕಿರಿಯ ಸಹಾಯಕರು–ಇವರು ಅನಾರೋಗ್ಯದ ನಿಮಿತ್ತ ಸ್ವಯಂ ನಿವೃತ್ತಿಗೆ ಕೋರಿದ್ದರಿಂದ ಸೇವೆಯಿಂದ ನಿವೃತ್ತಿಗೊಳಿಸಿ ಬಿಡುಗಡೆಗೊಳಿಸಲಾಗಿತ್ತು. ಆದರೆ ಸದರಿಯವರಿಗೆ ಸಂಬಂಧಿಸಿದ ಪ್ರಕರಣವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಸದರಿಯವರನ್ನು ಸೇವೆಯಿಂದ ಬಿಡುಗಡೆಗೊಳಿಸಿದ್ದ ಆದೇಶಗಳನ್ನು ರದ್ದುಗೊಳಿಸಿ ಸೇವೆಯಲ್ಲಿ ಮುಂದುವರೆಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿತು.

**2021–ಸಿಂ–3.06(ಐ):** School of Education ಗೆ ನಿರ್ದೇಶಕರನ್ನು ನೇಮಿಸುವ ಕುರಿತು.

**ನಿರ್ಣಯ:** ಸ್ನಾತಕೋತ್ತರ ಶಿಕ್ಷಣ ವಿಭಾಗದ ಪ್ರಾಧ್ಯಾಪಕರಾದ ಡಾ. ಗೀತಾ ಸಿ. – ಇವರು ಪ್ರಸ್ತುತ ಶಿಕ್ಷಣ ನಿಕಾಯದ ಡೀನರಾಗಿದ್ದು ಡೀನರ ಅವಧಿಯು ಸದ್ಯದಲ್ಲೇ ಮುಗಿಯಲಿರುವುದರಿಂದ ಅವರನ್ನೇ ಈ ಹುದ್ದೆಗೆ ನೇಮಿಸಬಹುದೆಂದು ಸದಸ್ಯರು ಅಭಿಪ್ರಾಯಪಟ್ಟರು. ಸುಧೀರ್ಘ ಚರ್ಚೆಯ ನಂತರ ಡೀನರ ಅವಧಿ ಮುಗಿದ ನಂತರ ಇವರನ್ನು School of Education ಗೆ ನಿರ್ದೇಶಕರನ್ನಾಗಿ ನೇಮಿಸಲು ಸಭೆಯು ಅನುಮೋದನೆ ನೀಡಿತು.

**2021–ಸಿಂ–3.06(ಒ):** ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರ ನೇಮಕಾತಿ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರ ಅವಧಿ ಮುಗಿದಿರುವುದರಿಂದ ನೇಮಕಾತಿಗಾಗಿ ಪ್ರೊ. ಬಿ.ಎಸ್. ಬಿರದಾರ್, ಪ್ರೊ. ಅಶ್ಫಕ್ ಅಹಮದ್ ಮತ್ತು ಪ್ರೊ. ಪ್ರಶಾಂತ ನಾಯಕ ಜಿ. ಈ 03 ಪ್ರಾಧ್ಯಾಪಕರುಗಳ ಹೆಸರನ್ನು ಯಥಾವತ್ತಾಗಿ ಸರ್ಕಾರಕ್ಕೆ ಕಳುಹಿಸಿಕೊಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2021–ಸಿಂ–3.07:** ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗೆ ಮುದ್ರಣ ಮತ್ತು ಲೇಖನಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧದ ಇ–ಟೆಂಡರ್ ಅಂಗೀಕರಿಸಿ ದರ ಒಪ್ಪಂದ ಮಾಡಿಕೊಳ್ಳುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗೆ ಮುದ್ರಣ ಮತ್ತು ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧದ ಇ–ಟೆಂಡರ್ ಅಂಗೀಕರಿಸಿ ದರ ಒಪ್ಪಂದ ಮಾಡಿಕೊಳ್ಳಲು ಅನುಮತಿ ನೀಡಲಾಯಿತು

## ಹಣಕಾಸು ವಿಭಾಗ

**2021–ಸಿಂ–3.08:** 2020–21ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆ ಕುರಿತು.

**ನಿರ್ಣಯ:** 2020–21ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

## ಎಸ್ಟೇಟ್ ವಿಭಾಗ

**2021–ಸಿಂ–3.09:** ವಿಶೇಷ ಕ್ರೀಡಾ ತರಬೇತಿ ಕೇಂದ್ರ (ಎಸ್.ಟಿ.ಸಿ.) ಸ್ಥಾಪನೆಗೆ ಸಹ್ಯಾದ್ರಿ ಕಾಲೇಜು ಆವರಣದ ಜಮೀನನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸುವ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ವಿಶೇಷ ಕ್ರೀಡಾ ತರಬೇತಿ ಕೇಂದ್ರ (ಎಸ್.ಟಿ.ಸಿ.) ಸ್ಥಾಪನೆಗೆ ಸಹ್ಯಾದ್ರಿ ಕಾಲೇಜು ಆವರಣದ ಜಮೀನನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸುವಂತೆ ಕೋರಿರುತ್ತಾರೆ ಎಂದು ತಿಳಿಸಿದರು. ಆದರೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 3(4)ಪ್ರಕಾರ ಸರ್ಕಾರದ ಪೂರ್ವಾನುಮೋದನೆ ಪಡೆದುಕೊಳ್ಳದೇ ವಿಶ್ವವಿದ್ಯಾಲಯವು ಯಾವುದೇ ಸ್ಥಿರ ಮತ್ತು ಚರ ಸ್ವತ್ತನ್ನು ಗುತ್ತಿಗೆ ಅಥವಾ ಬಾಡಿಗೆ ನೀಡಲು, ಮಾರಾಟ ಅಥವಾ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ. ಅಲ್ಲದೇ ಸಹ್ಯಾದ್ರಿ ಕಾಲೇಜು ಹಿರಿಯ ವಿದ್ಯಾರ್ಥಿಗಳ

ಸಂಘ ಶಿವಮೊಗ್ಗ, ಸಹ್ಯಾದ್ರಿ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಹಾಗೂ ಇತರೆ ಸಂಘಟನೆಗಳು ಈ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಈ ಕುರಿತು ಚರ್ಚಿಸುತ್ತಾ ಇದೊಂದು ಸಕಾರಾತ್ಮಕವಾದ ಯೋಜನೆಯಾಗಿದ್ದು, ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸ್ಥಳೀಯ ಕ್ರೀಡಾಪಟುಗಳಿಗೆ ಇದರಿಂದ ಬಹಳ ಉಪಯುಕ್ತವಾಗಲಿದೆ ಎಂದು ಸಭೆಯು ಅಭಿಪ್ರಾಯಪಟ್ಟಿತು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಈ ಯೋಜನೆಯು ಕ್ರೀಡೆಗೆ ಅನುಕೂಲಕರ ವಾತಾವರಣ ಸೃಷ್ಟಿಸುವುದರಿಂದ ಯಾವುದೇ ರೀತಿಯ ನೋಂದಣಿ ಮಾಡಿಕೊಳ್ಳದೇ ವಿಶ್ವವಿದ್ಯಾಲಯ ಹಾಗೂ ಜಿಲ್ಲಾಡಳಿತ ಒಡಂಬಡಿಕೆ (MOU) ಮೂಲಕ ಕೆಲವು ಷರತ್ತಿಗೊಳಪಟ್ಟು ಹಸ್ತಾಂತರ ಮಾಡಿಕೊಳ್ಳಲು ನಿರ್ಣಯಿಸಲಾಯಿತು ಹಾಗೂ ಈ ಕುರಿತು ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಕೋರಲು ತೀರ್ಮಾನಿಸಲಾಯಿತು.

**2021–ಸಿಂ–3.10:** ಆವರಣದಲ್ಲಿನ ತ್ಯಾಜ್ಯ ವಸ್ತಗಳನ್ನು ಸಂಗ್ರಹಿಸಿ, ವಾಹನದ ಮೂಲಕ ವಿಲೇವಾರಿ ಕಾರ್ಯಕ್ಕಾಗಿ ಸೂಕ್ತ ಗೂಡ್ಸ್ ವಾಹನವನ್ನು ಒದಗಿಸುವ ಸಂಬಂಧ ಇ–ಟೆಂಡರ್ ಮೂಲಕ ಕ್ರಮಕೈಗೊಂಡಿರುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಆವರಣದಲ್ಲಿರುವ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ, ವಾಹನದ ಮೂಲಕ ವಿಲೇವಾರಿ ಕಾರ್ಯಕ್ಕಾಗಿ ಸೂಕ್ತ ಗೂಡ್ಸ್ ವಾಹನವನ್ನು ಒದಗಿಸುವ ಸಂಬಂಧ ಇ–ಟೆಂಡರ್ ಮೂಲಕ ಕೈಗೊಂಡಿರುವ ಕ್ರಮವನ್ನು ಅನುಮೋದಿಸಲಾಯಿತು.

**2021–ಸಿಂ–3.11:** ಶಿವಮೊಗ್ಗ ನಗರದಲ್ಲಿರುವ ಕುವೆಂಪು ವಿಶ್ವವಿದ್ಯಾಲಯದ ಸಹ್ಯಾದ್ರಿ ಕಾಲೇಜಿಗೆ ಸೇರಿದ ಸ್ಥಳದಲ್ಲಿ ಹಲವಾರು ಜನಾಂಗಗಳು ವಲಸೆ ಬಂದು ನೆಲೆಸಿರುವ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಣೆ ಮಾಡುತ್ತಿರುವ ಬಗ್ಗೆ.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಶಿವಮೊಗ್ಗ ನಗರದಲ್ಲಿರುವ ಕುವೆಂಪು ವಿಶ್ವವಿದ್ಯಾಲಯದ ಸಹ್ಯಾದ್ರಿ ಕಾಲೇಜಿಗೆ ಸೇರಿದ ಸ್ಥಳದಲ್ಲಿ ಹಲವಾರು ಜನಾಂಗಗಳು ವಲಸೆ ಬಂದು ನೆಲೆಸಿದ್ದು, ಕಾಲೇಜಿನ ಶೈಕ್ಷಣಿಕ ಅಭಿವೃದ್ಧಿ ದೃಷ್ಟಿಯಿಂದ ಜಾಗವು ಅತ್ಯಗತ್ಯವಾಗಿ ಬೇಕಾಗಿರುವುದರಿಂದ ಸಹ್ಯಾದ್ರಿ ಕಾಲೇಜಿನ ಬೈಪಾಸ್ ರಸ್ತೆ ಪಕ್ಕದ ಹಕ್ಕಿ–ಪಿಕ್ಕಿ ಅಲೆಮಾರಿ ಜನಾಂಗದ ಗುಡಿಸಲುಗಳನ್ನು ತೆರವುಗೊಳಿಸಿ ಈ ಜನಾಂಗದವರನ್ನು ಬೇರೆಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಶಿವಮೊಗ್ಗ ಜಿಲ್ಲಾ ಜಿಲ್ಲಾಧಿಕಾರಿಗಳನ್ನು ಕೋರಲು ನಿರ್ಣಯಿಸಲಾಯಿತು. ಹಾಗೂ ಶೈಕ್ಷಣಿಕ ವಾತಾವರಣಕ್ಕೆ ಹಾನಿಯಾಗದಂತೆ ಹಾಗೂ ಮುಂಬರುವ ಖೇಲೋ ಇಂಡಿಯಾ ಯೋಜನೆಗೆ ಪೂರಕವಾದ ವಾತಾವರಣಕ್ಕೆ ತೊಂದರೆಯಾಗದಂತೆ ಸದರಿ ಜಾಗವನ್ನು ಕೊಳಚೆ ಪ್ರದೇಶವೆಂದು ಘೋಷಣೆ ಮಾಡದಿರುವಂತೆ ಜಿಲ್ಲಾಧಿಕಾರಿಗಳನ್ನು ಕೋರಲು ತೀರ್ಮಾನಿಸಲಾಯಿತು.

## ಪರೀಕ್ಷಾ ವಿಭಾಗ

**2021–ಸಿಂ–3.12(ಎ):** ಪರೀಕ್ಷಾ ಕಾರ್ಯಗಳನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸಲು ಕರೆಯಲಾದ ಟೆಂಡರ್ ಕುರಿತು.

ಚರ್ಚೆ: ಕುಲಸಚಿವರು(ಪರೀಕ್ಷಾಂಗ)ರವರು ವಿಷಯ ಮಂಡಿಸಿ ಮಾತನಾಡಿ, ಈಗ ಪರೀಕ್ಷಾ ಕಾರ್ಯಗಳನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸುತ್ತಿರುವ ಮೆ॥ ಲಾಜಿಸಿಸ್ ಸಂಸ್ಥೆಯ ಕರಾರು ದಿ:12–05–2021ರಂದು ಕೊನೆಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ಈ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಆದರೆ ಸದರಿ ಟೆಂಡರ್ ಪ್ರಕ್ರಿಯೆಗೆ ಮೆ॥ ಲಾಜಿಸಿಸ್ ಸಂಸ್ಥೆಯವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ ಎಂದರು. ಈ ಬಗ್ಗೆ ಸುಧೀರ್ಘ ಚರ್ಚೆ ನಡೆಸಲಾಯಿತು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಪ್ರಸ್ತುತ ಚಾಲನೆ ನೀಡಿರುವ ಟೆಂಡರ್ ಪ್ರಕ್ರಿಯೆಯನ್ನು ಹಿಂಪಡೆದು, ಹೊಸ ಟೆಂಡರ್ ಕರೆಯಲು ಹಾಗೂ ಈ ಪ್ರಕ್ರಿಯೆಯು ಸಂಪೂರ್ಣಗೊಂಡು ಹೊಸ ಟೆಂಡರ್ ಚಾಲ್ತಿಗೆ ಬರುವವರೆಗೆ ಈ ಹಿಂದೆ ಕಾರ್ಯ ನಿರ್ವಹಿಸುತ್ತಿರುವ ಮೆ॥ ಲಾಜಿಸಿಸ್ ಸಂಸ್ಥೆಯ ಸೇವೆಯನ್ನು ಮುಂದುವರೆಸಲು ಸಭೆಯು ನಿರ್ಣಯಿಸಿತು.

**2021–ಸಿಂ–3.12(ಬಿ):** M/s KEONICS Bangalore - ಇವರು Online Examination Mangement system ಅಳವಡಿಸಲು ಸಲ್ಲಿಸಿರುವ ಪ್ರಸ್ತಾವನೆ ಅನುಮೋದನೆ ಕುರಿತು.

**ನಿರ್ಣಯ:** ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳದೇ ಇರುವುದರಿಂದ ಮುಂದೂಡಲಾಯಿತು.

## ಅಭಿವೃದ್ಧಿ ವಿಭಾಗ

**2021–ಸಿಂ–3.13:** ಬಾವುಲಿ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ, BAT Conservation India Trust Bangalore – ಇವರೊಂದಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ವಿಭಾಗ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.

**ನಿರ್ಣಯ:** ಬಾವುಲಿ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ, BAT Conservation India Trust Bangalore – ಇವರೊಂದಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ವಿಭಾಗದ ಕರಡು ಒಡಂಬಡಿಕೆ (MOU)ಯನ್ನು ಸಭೆಯು ಅನುಮೋದಿಸಿತು.

**2021–ಸಿಂ–3.14:** ಸೈನ್ಯ ಇತಿಹಾಸಕ್ಕೆ ಸಂಬಂಧಿಸಿದಂತೆ ಅಧ್ಯಯನ ಪೀಠ ಸ್ಥಾಪಿಸುವ ಕುರಿತು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಸೈನ್ಯ ಇತಿಹಾಸಕ್ಕೆ ಸಂಬಂಧಿಸಿದ ಅಧ್ಯಯನ ಪೀಠ ಸ್ಥಾಪಿಸುವ ಕುರಿತು ಸಂಬಂಧಿಸಿದ ವಿಭಾಗದಿಂದ ಪ್ರಸ್ತಾವನೆ ಪಡೆದು, ಸಕ್ಷಮ ಪ್ರಾಧಿಕಾರದ ಪರಿಶೀಲನೆ ನಂತರ ಅನುಮತಿಸಲು ನಿರ್ಣಯಿಸಲಾಯಿತು.

**2021–ಸಿಂ–3.14(ಎ):** ಶ್ರೀ ಪ್ರಮೋದ್ ಮಳ್ಳಗಟ್ಟಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತು.

**ನಿರ್ಣಯ:** ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳದೇ ಇರುವುದರಿಂದ ಮುಂದೂಡಲಾಯಿತು.

## ಶೈಕ್ಷಣಿಕ ವಿಭಾಗ

**2021–ಸಿಂ–3.15:** "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ (ವಿಜ್ಞಾನ ನಿಕಾಯದ ಎಂ.ಎಸ್ಸಿ., **ಗಣಿತಶಾಸ್ತ್ರ** ಅಧ್ಯಯನ)

**ನಿರ್ಣಯ:** ಚರ್ಚೆಯ ನಂತರ "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ (ವಿಜ್ಞಾನ **ನಿಕಾಯದ** ಎಂ.ಎಸ್ಸಿ., **ಗಣಿತಶಾಸ್ತ್ರ** ಅಧ್ಯಯನ)ವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು. ವಿಶ್ವವಿದ್ಯಾಲಯದಲ್ಲಿ ದತ್ತಿನಿಧಿಯನ್ನು ಸ್ಥಾಪಿಸಿದ ಮೇಲ್ಕಂಡ ದಾನಿಗಳಿಗೆ ವಿಶ್ವವಿದ್ಯಾಲಯದ ಪರಿಯಿಂದ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು ಹಾಗೂ ಧನ್ಯವಾದ ಪತ್ರ ಕಳಿಸಲು ತೀರ್ಮಾನಿಸಲಾಯಿತು.

**2021–ಸಿಂ–3.16:** "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ (ವಾಣಿಜ್ಯ ನಿಕಾಯದ ಎಂ.ಕಾಂ., ಅಧ್ಯಯನ)

**ನಿರ್ಣಯ:** "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ (ವಾಣಿಜ್ಯ ನಿಕಾಯದ ಎಂ.ಕಾಂ., ಅಧ್ಯಯನ) ವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು. ವಿಶ್ವವಿದ್ಯಾಲಯದಲ್ಲಿ ದತ್ತಿನಿಧಿಯನ್ನು ಸ್ಥಾಪಿಸಿದ ಮೇಲ್ಕಂಡ ದಾನಿಗಳಿಗೆ ವಿಶ್ವವಿದ್ಯಾಲಯದ ಪರಿಯಿಂದ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು ಹಾಗೂ ಧನ್ಯವಾದ ಪತ್ರ ಕಳಿಸಲು ತೀರ್ಮಾನಿಸಲಾಯಿತು.

**2021–ಸಿಂ–3.17:** "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ (ವಾಣಿಜ್ಯ ನಿಕಾಯದ ಎಂ.ಬಿ.ಎ.,. ಅಧ್ಯಯನ)

**ನಿರ್ಣಯ:** "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ

ಸ್ವರ್ಣ ಪದಕ (ವಾಣಿಜ್ಯ ನಿಕಾಯದ ಎಂ.ಬಿ.ಎ., ಅಧ್ಯಯನ) ವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು. ವಿಶ್ವವಿದ್ಯಾಲಯದಲ್ಲಿ ದತ್ತಿನಿಧಿಯನ್ನು ಸ್ಥಾಪಿಸಿದ ಮೇಲ್ಕಂಡ ದಾನಿಗಳಿಗೆ ವಿಶ್ವವಿದ್ಯಾಲಯದ ಪರಿಯಿಂದ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು ಹಾಗೂ ಧನ್ಯವಾದ ಪತ್ರ ಕಳಿಸಲು ತೀರ್ಮಾನಿಸಲಾಯಿತು.

**2021–ಸಿಂ–3.17(ಎ):** ವಿದ್ಯಾರ್ಥಿಗಳಿಗೆ ಅಪಘಾತ ರಕ್ಷಣಾ ವಿಮಾ ಯೋಜನೆಯ ಸಂಬಂಧ ಪಾಲಿಸಿ ಮೊತ್ತವನ್ನು ಹೆಚ್ಚಿಸುವ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳಿಗೆ ಅಪಘಾತ ರಕ್ಷಣಾ ವಿಮಾ ಯೋಜನೆಯ ಪಾಲಿಸಿ ಅವಧಿಯು ದಿನಾಂಕ:28–03–2019 ರಿಂದ 27–03–2021ರವರೆಗೆ ಇದ್ದು, ಮುಕ್ತಾಯಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಅರ್ಹ ವಿಮಾ ಕಂಪನಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಟೆಂಡರ್ ದಾಖಲಾತಿಗಳ ಪರಿಶೀಲನೆಗೆ ಸಮಿತಿಯನ್ನು ರಚಿಸಿ ದಾಖಲಾತಿಗಳನ್ನು ಪರಿಶೀಲಿಸಲಾಗಿ M/S National Insurance company Ltd., ಇವರು ಅರ್ಹರಾಗಿ ಆಯ್ಕೆಯಾಗಿರುತ್ತಾರೆ. ವಿದ್ಯಾರ್ಥಿಗಳಿಂದ ಪಡೆಯುವ ಅಪಘಾತ ರಕ್ಷಣಾ ವಿಮಾ ಯೋಜನೆಯ ಮೊತ್ತಕ್ಕೆ ಪ್ರತಿ ವಿದ್ಯಾರ್ಥಿಗಳಿಗೆ ರೂ.100–00ರಂತೆ ವಂತಿಕೆ ಶುಲ್ಕ ಹೆಚ್ಚಿಸುವ ಕುರಿತು ಪ್ರಸ್ತಾಪವಿದೆ ಎಂದರು. ಈ ಕುರಿತು ಸುಧೀರ್ಘವಾಗಿ ಚರ್ಚಿಸಲಾಯಿತು.

**ನಿರ್ಣಯ:** ಚರ್ಚೆಯ ನಂತರ ವಂತಿಕೆ ಶುಲ್ಕ ರೂ.100–00ಗಳಿಗೆ ಹೆಚ್ಚಿಸಿದಲ್ಲಿ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ. ಆದ್ದರಿಂದ ಇದರ ಬದಲಾಗಿ ಪ್ರತಿ ವಿದ್ಯಾರ್ಥಿಗಳಿಗೆ ವಂತಿಕೆ ಶುಲ್ಕವನ್ನು ರೂ.50–00 ಶುಲ್ಕವನ್ನು ನಿಗದಿ ಪಡಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದರಿಂದ ವಿಮಾ ಕಂಪನಿಯವರನ್ನು ಕರೆಸಿ ಈ ಕುರಿತು ಚರ್ಚಿಸಿ ನಂತರದಲ್ಲಿ ಸದರಿ ವಿಷಯವನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**2021–ಸಿಂ–3.17(ಬಿ):** "ಪ್ರೊ. ಎ. ರಾಮೇಗೌಡ, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಕ್ಯಾಂಪಸ್" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** "ಪ್ರೊ. ಎ. ರಾಮೇಗೌಡ, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಕ್ಯಾಂಪಸ್" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು. ವಿಶ್ವವಿದ್ಯಾಲಯದಲ್ಲಿ ದತ್ತಿನಿಧಿಯನ್ನು ಸ್ಥಾಪಿಸಿದ ಮೇಲ್ಕಂಡ ದಾನಿಗಳಿಗೆ ವಿಶ್ವವಿದ್ಯಾಲಯದ ಪರಿಯಿಂದ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು ಹಾಗೂ ಧನ್ಯವಾದ ಪತ್ರ ಕಳಿಸಲು ತೀರ್ಮಾನಿಸಲಾಯಿತು.

**2021–ಸಿಂ–3.17(ಸಿ):** ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಭದ್ರಾವತಿ ಈ ಕಾಲೇಜಿನ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣ ಕುರಿತು.

**ನಿರ್ಣಯ:** ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಭದ್ರಾವತಿ, ಈ ಕಾಲೇಜಿನ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣಕ್ಕಾಗಿ ಸಮಿತಿ ರಚಿಸಬೇಕಾಗಿದ್ದು, ಐದು ಜನ ಪರಿಣಿತರ ಪಟ್ಟಿಯಲ್ಲಿ ಪ್ರೊ. ಲೋಕೇಶ್, ಸ್ನಾತಕೋತ್ತರ ಔದ್ಯೋಗಿಕ ರಸಾಯನ ಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಹಾಗೂ ಪ್ರೊ. ಜೆ.ಪಿ. ಮಮತ ಸ್ನಾತಕೋತ್ತರ ರಸಾಯನ ಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ ಇವರನ್ನು ಬಾಹ್ಯ ಸದಸ್ಯರನ್ನಾಗಿ ನೇಮಿಸಲು ಸಭೆಯು ಅನುಮತಿಸಿತು.

**2021–ಸಿಂ–3.17(ಡಿ):** Design Development Implementation & Maintainance of Fraternity Platform Infrastructure (FPI)ನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಲು ಉದ್ದೇಶಿಸಿರುವ ಬಗ್ಗೆ.

**ನಿರ್ಣಯ:** ಸದರಿ ವಿಷಯವನ್ನು ಮುಂದೂಡಲಾಯಿತು.

**2021–ಸಿಂ–3.17(ಎಫ್):**2021–22ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಪ್ರಥಮ ವರ್ಷದ ಸ್ನಾತಕೋತ್ತರ ಪದವಿಗಳ ಶುಲ್ಕಗಳನ್ನು ಪುನರ್ ರಚಿಸುವ ಕುರಿತು.

ನಿರ್ಣಯ: 2021–22ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಪ್ರಥಮ ವರ್ಷದ ಸ್ನಾತಕೋತ್ತರ ಪದವಿಗಳ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು ರಚಿಸಲಾಗಿದ್ದ ಸಮಿತಿಯು ನೀಡಿರುವ ವರದಿಯನ್ನು ಸಭೆಯು ಪರಿಶೀಲಿಸಿತು. ಸದ್ಯದ ಪರಿಸ್ಥಿತಿಯಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ 2021–22ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿಗಳ ಶುಲ್ಕಗಳನ್ನು ಪರಿಷ್ಕರಿಸದೇ ಇರಲು ತೀರ್ಮಾನಿಸಲಾಯಿತು. ಆದರೆ ವಿಶ್ವವಿದ್ಯಾಲಯವು ಆಡಳಿತಾತ್ಮಕ ವೆಚ್ಚಗಳನ್ನು ಸರಿದೂಗಿಸುವುದು ಅನಿವಾರ್ಯವಾಗಿರುವ ಹಿನ್ನೆಲೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಶುಲ್ಕಗಳನ್ನು ಪರಿಷ್ಕರಿಸಲು ನಿರ್ಣಯಿಸಲಾಯಿತು.

## ದೂರಶಿಕ್ಷಣ ನಿರ್ದೇಶನಾಲಯ

**2021–ಸಿಂ–3.18:** ಅಧ್ಯಯನ ಸಾಮಾಗ್ರಿಗಳನ್ನು ಮುದ್ರಿಸುವ ಕುರಿತು.

ನಿರ್ಣಯ: ಅನುಮೋದಿಸಲಾಯಿತು.

**2021–ಸಿಂ–3.18(ಎ):**ದಿನಾಂಕ:07–04–2021 ರಂದು ಜರುಗಿದ ಮೇಲ್ವಿಚಾರಣಾ ಸಮಿತಿ ಸಭೆಯ ನಡಾವಳಿ ಅನುಮೋದನೆ ಕುರಿತು.

ನಿರ್ಣಯ: ದಿನಾಂಕ:07–04–2021 ರಂದು ಜರುಗಿದ ಮೇಲ್ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್

**2021–ಸಿಂ–3.19:** 2021–22ನೇ ಸಾಲಿನಿಂದ ಅನ್ವಯವಾಗುವಂತೆ ಸಂಯೋಜನೆ ಶುಲ್ಕಗಳನ್ನು ಪರಿಷ್ಕರಿಸಿರುವ ಬಗ್ಗೆ.

ನಿರ್ಣಯ: 2021–22ನೇ ಸಾಲಿನಿಂದ ಅನ್ವಯವಾಗುವಂತೆ ಸಂಯೋಜನೆ ಶುಲ್ಕಗಳನ್ನು ಪರಿಷ್ಕರಿಸಿರುವುದನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

## ದೈಹಿಕ ಶಿಕ್ಷಣ ವಿಭಾಗ

**2021–ಸಿಂ–3.19(ಎ):** ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿ ಅನುಮೋದನೆಗಾಗಿ.

ನಿರ್ಣಯ: ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ಸಭೆಯು ಅನುಮೋದಿಸಿತು.

## ಯು.ಸಿ.ಸಿ.ಎಫ್

**2021–ಸಿಂ–3.19(ಬಿ):** ವಿಶ್ವವಿದ್ಯಾಲಯದ ಕ್ಯಾಂಪಸ್ ನೆಟ್‌ವರ್ಕ್‌ನ ಸುರಕ್ಷತೆಗಾಗಿ SOPHOS UTM Firewall Software License ನವೀಕರಣ ಮತ್ತು Firewall ಪರಿಕರದ AMC ನವೀಕರಿಸುವ ಸಂಬಂಧ ಖರೀದಿಸುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದ ಕ್ಯಾಂಪಸ್ ನೆಟ್‌ವರ್ಕ್‌ನ ಸುರಕ್ಷತೆಗಾಗಿ SOPHOS UTM Firewall Software License ನವೀಕರಣ ಮತ್ತು Firewall ಪರಿಕರದ AMC ನವೀಕರಿಸಲು ಸಭೆಯು ಅನುಮತಿಸಿತು.

**2021–ಸಿಂ–3.20:** <u>ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:</u>

1. ಶ್ರೀ ರಾಮಲಿಂಗಪ್ಪ ಹೆಚ್. – ಇವರು ಮಂಡಿಸಿದ ವಿಷಯಗಳು :

ನಿರ್ಣಯ: ಸದಸ್ಯರು ಸಭೆಗೆ ಗೈರಾಗಿರುತ್ತಾರೆ ಸದರಿ ಸಭೆಗೆ ಮಂಡಿಸಲು ಇವರು ಸಲ್ಲಿಸಿದ ಪ್ರಸ್ತಾವನೆಗೆ ವಿಶ್ವವಿದ್ಯಾಲಯವು ಲಿಖಿತವಾಗಿ ಮಾಹಿತಿಯನ್ನು ಒದಗಿಸಲಾಗಿದೆ.

**2. ಶ್ರೀ ಧರ್ಮಪ್ರಸಾದ್ ಜೆ. ಇವರು ಮಂಡಿಸಿದ ವಿಷಯಗಳು :**

**i.** **ಅತಿಥಿ ಉಪನ್ಯಾಸಕರುಗಳ ಸೇವಾ ಭದ್ರತೆ ಮತ್ತು ವೇತನಕ್ಕೆ ಸಂಬಂಧಿಸಿದಂತೆ ಅನೇಕ ಸಿಂಡಿಕೇಟ್ ಸಭೆಗಳಲ್ಲಿ ವೇತನ ಹೆಚ್ಚಳ ಮತ್ತು ಸೇವಾ ಭದ್ರತೆಗೆ ಸಂಬಂಧಿಸಿದಂತೆ ಚರ್ಚಿಸಿ ಪೂರಕವಾದ ನಿರ್ಣಯವಾಗಿದ್ದರೂ ಅನೇಕ ನಿರ್ಣಯಗಳು ಅನುಷ್ಠಾನಗೊಂಡಿರುವುದಿಲ್ಲ. ಈ ಕುರಿತಂತೆ ಮತ್ತೊಮ್ಮೆ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳುವ ಬಗ್ಗೆ.**

ನಿರ್ಣಯ: ಈ ಕುರಿತು ಚರ್ಚೆಯ ನಂತರ ಈಗಾಗಲೇ ಹಲವು ಸಭೆಗಳಲ್ಲಿ ಈ ವಿಷಯದ ಕುರಿತು ಚರ್ಚೆಯಾಗಿದ್ದು, ಅತಿಥಿ ಉಪನ್ಯಾಸಕರ ವೇತನ ಹೆಚ್ಚಿಸಲು ಹಾಗೂ 11 ತಿಂಗಳು ವೇತನ ಪಾವತಿಸುವ ಕುರಿತಂತೆ ಇನ್ನೊಮ್ಮೆ ಹಣಕಾಸು ಅಧಿಕಾರಿಗಳ ಅಭಿಪ್ರಾಯ ಪಡೆಯಲು ತೀರ್ಮಾನಿಸಲಾಯಿತು.

**ii.** **ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿ 2017 ಅಂತಿಮಗೊಂಡ ನಂತರ ಬಡ್ತಿ ವೇತನ ನಿಗದೀಕರಣಕ್ಕೆ ಸಂಬಂಧಿಸಿದಂತೆ ಪೂರಕ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ನಮ್ಮ ಗಮನಕ್ಕೆ ಬಂದ ಹಾಗೆ ಯಾವುದೇ ಪೂರಕ ನಿರ್ಣಯಗಳು ಅನುಷ್ಠಾನವಾಗಿರುವುದಿಲ್ಲ. ಇದರ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳುವ ಬಗ್ಗೆ.**

ನಿರ್ಣಯ: ಚರ್ಚೆಯ ನಂತರ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ, ಅದರಂತೆ ವೇತನ ನಿಗದೀಕರಣ ಹಾಗೂ ಬಡ್ತಿಗೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

ಮುಂದುವರೆದು ಮಾತನಾಡಿದ ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜೆ. – ಇವರು ರಾಷ್ಟ್ರೀಯ ಶಿಕ್ಷಣ ನೀತಿಯ ಟಾಸ್ಕ್ ಫೋರ್ಸ್ ಕಮಿಟಿಯ ಸಭೆ ಕರೆಯಬೇಕು ಎಂದರು.

ಇತ್ತೀಚೆಗೆ ಸರ್ಕಾರವು ಮದುವೆಯಾದ ಹೆಣ್ಣುಮಕ್ಕಳಿಗೂ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ಅವಕಾಶ ಕಲ್ಪಿಸಿದೆ ಅದರಂತೆ ವಿಶ್ವವಿದ್ಯಾಲಯದಲ್ಲಿ ಕಿರಿಯ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದು ಸೇವೆಯಲ್ಲಿರುವಾಗಲೇ ನಿಧನರಾದ ರಮಾಮಣಿ ಇವರ ಮಗಳಾದ ಶ್ರೀಮತಿ ಶ್ವೇತಾ – ಇವರಿಗೆ ಸರ್ಕಾರದ ನಿಯಮಗಳ ಅನ್ವಯ ನೌಕರಿ ನೀಡಬೇಕೆಂದು ಮನವಿ ಮಾಡಿದರು.

ಹಾಗೂ ಶ್ರೀ ಮಂಜುನಾಥ ಎಸ್. ಹಿರಿಯ ಸಹಾಯಕರು ಇವರಿಗೆ ತಡೆ ಹಿಡಿಯಲಾದ ಸೌಲಭ್ಯಗಳನ್ನು ಮಂಜೂರು ಮಾಡಲು ಸೂಚಿಸಬೇಕೆಂದು ಸಭೆಯಲ್ಲಿ ಕೋರಿದರು.

ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಶ್ರೀ ವಿದ್ಯಾಶಂಕರ, ಸಹಾಯಕ ಪ್ರಾಧ್ಯಾಪಕರು, ಕಂಪ್ಯೂಟರ್ ಸೈನ್ಸ್ ವಿಭಾಗ ಇವರು ಎನ್.ಪಿ.ಎಸ್ ಸಾಲಕ್ಕಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ ಇದನ್ನು ಪರಿಗಣಿಸುವಂತೆ ಕೋರಿದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಮೇಲ್ಕಂಡ ಅಂಶಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಹಾಗೂ ಉಳಿದಂತೆ ಸದಸ್ಯರು ಕೋರಿದ ಇತರೆ ಮಾಹಿತಿಗಳನ್ನು ಈಗಾಗಲೇ ಲಿಖಿತವಾಗಿ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು, ಸಭೆಯು ಒಪ್ಪಿತು.

**3. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ :**

**ವಿಷಯ: ಕುವೆಂಪು ವಿಶ್ವವಿದ್ಯಾನಿಲಯದ ಕೆಳದಿ ವಸ್ತು ಸಂಗ್ರಹಾಲಯದ ಅಭಿವೃದ್ಧಿ ಕುರಿತು.**

ಚರ್ಚೆ: ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ಹಸ್ತ ಪ್ರತಿಗಳ ಸಂರಕ್ಷಣೆ, ಸಾರ್ವಜನಿಕರ ಪ್ರವೇಶಕ್ಕೆ ಶುಲ್ಕ ನಿಗದಿ ಹಾಗೂ ಕೆಳದಿ ವಸ್ತು ಸಂಗ್ರಹಾಲಯದ ಅಭಿವೃದ್ಧಿಗಾಗಿ ಸಮಿತಿ ರಚನೆ ಹಾಗೂ ಇನ್ನಿತರೆ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸಲಾಯಿತು.

ನಿರ್ಣಯ: ಇದಕ್ಕೆ ಉತ್ತರಿಸಿದ ಮಾನ್ಯ ಕುಲಪತಿಗಳು ಕೆಳದಿ ವಸ್ತು ಸಂಗ್ರಹಾಲಯದ ಸಮಗ್ರ ಅಭಿವೃದ್ಧಿಗಾಗಿ ಮುಂದಿನ ಬಜೆಟ್‌ನಲ್ಲಿ ರೂ. 10 ಕೋಟಿ ಮೀಸಲಿಡುವುದಾಗಿ ಸಭೆಗೆ ತಿಳಿಸಿದರು. ಇದನ್ನು ಸಭೆಯು ಒಪ್ಪಿತು. ಮುಂದುವರೆದು ಕೆಳದಿ ವಸ್ತು ಸಂಗ್ರಹಾಲಯದ ಮುಂಭಾಗದಲ್ಲಿ ನಾಮಫಲಕ ಅಳವಡಿಸಲು

ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು. ಉಳಿದಂತೆ ಸದಸ್ಯರು ಸಭೆಗೆ ಮಂಡಿಸಲು ಸಲ್ಲಿಸಿದ ಪ್ರಸ್ತಾವನೆಗಳಿಗೆ ವಿಶ್ವವಿದ್ಯಾಲಯವು ಲಿಖಿತವಾಗಿ ಒದಗಿಸಿರುವ ಮಾಹಿತಿಯನ್ನು ಸಭೆಯು ಅಂಗೀಕರಿಸಿತು.

4. ಶ್ರೀ ಹೆಚ್.ಬಿ. ರಮೇಶಬಾಬು :

i. ವಿಷಯ: **ಹಿಂದಿನ ಸಭೆಯಲ್ಲಿ ವಿಶ್ವವಿದ್ಯಾಲಯದ " ಲಾಂಛನ (ಲೋಗೋ) ಬದಲಾವಣೆ, ಮಾರ್ಪಾಡು ವಿಷಯಕ್ಕೆ ಸಂಬಂಧಿಸಿದ ಸಮಿತಿ ರಚನೆಯಾಗಿತ್ತು ಆ ಸಮಿತಿಯ ಸಭೆಯ ದಿನಾಂಕ ನಿಗದಿಪಡಿಸುವ ಬಗ್ಗೆ.**

ನಿರ್ಣಯ: ಸದಸ್ಯರಾದ ಶ್ರೀ ಹೆಚ್.ಬಿ. ರಮೇಶಬಾಬು ಇವರು ಮಂಡಿಸಿದ ವಿಶ್ವವಿದ್ಯಾಲಯದ "ಲಾಂಛನ" (ಲೋಗೋ) ಬದಲಾವಣೆ/ಮಾರ್ಪಾಡು ವಿಷಯಕ್ಕೆ ಸಂಬಂಧಿಸಿದಂತೆ ರಚಿಸಲಾದ ಸಮಿತಿಯು ಸಭೆ ಸೇರುವ ಬಗ್ಗೆ ಹಾಗೂ ಈಗಾಗಲೇ ಹಿಂದಿನ ಸಭೆಯಲ್ಲಿ ಚರ್ಚೆಯಾಗಿರುವ ಬಗ್ಗೆ ಸಭೆಯು ಪರಿಶೀಲಿಸಿತು. ಈಗಾಗಲೇ ಸಮಿತಿ ರಚನೆಯಾಗಿರುವುದರಿಂದ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು ಚರ್ಚಿಸಿ ಸೂಕ್ತವಾದ ದಿನಾಂಕ ನಿಗದಿಪಡಿಸಿಕೊಂಡು ಸಭೆ ನಡೆಸುವಂತೆ ತಿಳಿಸಲು ನಿರ್ಣಯಿಸಲಾಯಿತು.

ii. ವಿಷಯ: **"ಛತ್ರಪತಿ ಶಿವಾಜಿ ಮಹಾರಾಜ" ರ ಅಧ್ಯಯನ ಕೇಂದ್ರ ಸ್ಥಾಪಿಸುವ ಬಗ್ಗೆ**

ನಿರ್ಣಯ: "ಛತ್ರಪತಿ ಶಿವಾಜಿ ಮಹಾರಾಜ"ರ ಅಧ್ಯಯನ ಕೇಂದ್ರ ಸ್ಥಾಪಿಸುವ ಕುರಿತು ಚರ್ಚೆಯ ನಂತರ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರಿಂದ ಈ ಕುರಿತು ವರದಿಯನ್ನು ಪಡೆದುಕೊಂಡು ತೀರ್ಮಾನಿಸಲು ನಿರ್ಣಯಿಸಲಾಯಿತು.

iii. ವಿಷಯ: **ಮುಂದುವರೆದ ಸಿಂಡಿಕೇಟ್ ಸಭೆಯಲ್ಲಿ ವಿಶೇಷವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿ, ಬೆಳವಣಿಗೆ ಬಗ್ಗೆ ಚರ್ಚಿಸುವ ಕುರಿತು.**

ಚರ್ಚೆ: ವಿಶ್ವವಿದ್ಯಾಲಯದ ಅಭಿವೃದ್ಧಿ, ಬೆಳವಣಿಗೆಯ ಬಗ್ಗೆ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಕಾಲೇಜುಗಳಲ್ಲಿನ ವಾತಾವರಣ ಮತ್ತು ಮಾದಕ ವಸ್ತುಗಳ ನಿಯಂತ್ರಣ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ನಿರ್ಣಯ: ಈ ಕುರಿತು ಸರ್ಕಾರ ಹಾಗೂ ಯು.ಜಿ.ಸಿ. ಮಾರ್ಗಸೂಚಿಗಳನ್ವಯ ಹಾಗೂ ವಿಶ್ವವಿದ್ಯಾಲಯ ವತಿಯಿಂದ ಅಗತ್ಯ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

iv. ವಿಷಯ: **ಸಹ್ಯಾದ್ರಿ ಕಾಲೇಜ್ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹಲವು ಸಮಿತಿಗಳು ರಚನೆಯಾಗಿದ್ದವು ಅವುಗಳ ಸಭೆಗಳನ್ನು ನಡೆಸುವುದರ ಬಗ್ಗೆ ಕಾರ್ಯಸೂಚಿಯಲ್ಲಿ ಅಳವಡಿಸುವುದು.**

ನಿರ್ಣಯ: ಸಹ್ಯಾದ್ರಿ ಕಾಲೇಜ್ ಅಭಿವೃದ್ಧಿಗೆ ಸಂಬಂಧಪಟ್ಟಂತೆ ರಚಿಸಲಾಗಿರುವ ಸಮಿತಿಗಳ ಸಭೆ ಕರೆಯುವಂತೆ ಸೂಚಿಸಲು ನಿರ್ಣಯಿಸಲಾಯಿತು.

5. ಪ್ರೊ. ಕೃಷ್ಣ ವಿ. – ಇವರು ಮಂಡಿಸಿದ ವಿಷಯಗಳು :

ವಿಷಯ: **ಜೈವಿಕ ತಂತ್ರಜ್ಞಾನ ವಿಭಾಗದ ಅಧ್ಯಾಪಕರುಗಳಾದ ಡಾ. ಹೆಚ್.ಎಂ. ಕುಮಾರಸ್ವಾಮಿ ಹಾಗೂ ಡಾ. ಸಂತೋಷ್‌ಕುಮಾರ್ ಹೆಚ್.ಎಸ್. ಇವರುಗಳಿಗೆ ಸಹ ಪ್ರಾಧ್ಯಾಪಕರ ಹುದ್ದೆಗೆ ಸಂದರ್ಶನ ಪತ್ರ ನೀಡಿಯೂ, ಸಂದರ್ಶನ ನಡೆಸದಿರುವ ಬಗ್ಗೆ.**

ಈ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯು ಚರ್ಚಿಸಿ ಮುಂಬರುವ ನೇಮಕಾತಿ ಮಂಡಳಿ ಸಭೆಯಲ್ಲಿ ಸದರಿ ಅಧ್ಯಾಪಕರುಗಳಿಗೆ ಸಂದರ್ಶನ ನಡೆಸಿ ವೃತ್ತಿಪದೋನ್ನತಿ ನೀಡಲು ಕ್ರಮಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.

**2021–ಸಿಂ–3.21: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ : ಯಾವುದೂ ಇರುವುದಿಲ್ಲ**

**2021–ಸಿಂ–3.22: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :**

1) **ಶ್ರೀ ಯುವರಾಜ್ ಬಿ.ಹೆಚ್. ಸದಸ್ಯರು** – ಇವರು ಮಾತನಾಡಿ ದ್ವಿತೀಯ ಪಿ.ಯು.ಸಿ/10–2 ಶಿಕ್ಷಣ ಪೂರೈಸಿ ಎರಡು ವರ್ಷಗಳವರೆಗೆ ವಿದ್ಯಾಭ್ಯಾಸ ಸ್ಥಗಿತಗೊಳಿಸಿದ ವಿದ್ಯಾರ್ಥಿ/ನಿಯರಿಗೆ ಪದವಿ ತರಗತಿಗಳಿಗೆ ಪ್ರವೇಶ ಪಡೆಯಲು ಇರುವ ಕುವೆಂಪು ವಿ.ವಿ. ಅನುಮತಿ ಪತ್ರ ಪಡೆದು ಪ್ರವೇಶ ಪಡೆಯುವ ನಿಯಮವನ್ನು ರದ್ದುಗೊಳಿಸಿ ಪ್ರವೇಶ ಪಡೆಯಲು ಅನುಮತಿ ಕೋರಿದರು.

   ಈ ಕುರಿತು ಪರಿಶೀಲಿಸಿ ನಿರ್ಣಯಿಸಲು ತೀರ್ಮಾನಿಸಲಾಯಿತು.

2) ಬಿ.ಜೆ.ಎಸ್. ಕುವೆಂಪು ಶಾಲೆಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕುವೆಂಪು ವಿಶ್ವವಿದ್ಯಾಲಯ ಜ್ಞಾನ ಸಹ್ಯಾದ್ರಿ ಆವರಣದಲ್ಲಿಯೇ ಮುಂದುವರೆಸಲು ಅವಕಾಶ ಕೋರಿ ಮನವಿ.

   ಸುದೀರ್ಘ ಚರ್ಚೆಯ ನಂತರ ಮಾನ್ಯ ಕುಲಪತಿಗಳು ಮಾತನಾಡಿ ಕೋವಿಡ್–19 ಹಿನ್ನಲೆಯಲ್ಲಿ ಬದಲಿ ವ್ಯವಸ್ಥೆ ಮಾಡಿಕೊಳ್ಳಲು ಸಮಯಾವಕಾಶ ಬೇಕಾಗಿರುವುದಾಗಿ ಕೋರಿರುವುದರಿಂದ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ 2021–22ನೇ ಸಾಲಿಗೆ ಬಿ.ಜೆ.ಎಸ್. ಕುವೆಂಪು ಶಾಲೆಯನ್ನು ಕುವೆಂಪು ವಿಶ್ವವಿದ್ಯಾಲಯ ಜ್ಞಾನಸಹ್ಯಾದ್ರಿ ಆವರಣದಲ್ಲಿಯೇ ಮುಂದುವರೆಸಲು ಅನುಮತಿ ನೀಡಬಹುದು ಎಂದರು. ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಸಭೆಯು ಅನುಮತಿಸಿತು.

ಪರೀಕ್ಷಾ ವಿಭಾಗದಲ್ಲಿ **EDGS** ಅಳವಡಿಕೆಯ ಕುರಿತು, ಚರ್ಚೆಯ ನಂತರ ಪರೀಕ್ಷಾಂಗ ಕುಲಸಚಿವರು ಅದನ್ನು ಇನ್ನೊಮ್ಮೆ ಪರಿಶೀಲಿಸಿ ವಿವರಗಳೊಂದಿಗೆ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. ಹಾಗೂ ಸದರಿ ಸಂಸ್ಥೆಯವರಿಗೆ ಈ ಸಂಬಂಧ ಯಾವುದೇ ಮುಂಗಡ ಪಾವತಿಸದಿರಲು(No Advance payment) ನಿರ್ಣಯಿಸಲಾಯಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
(ಕುಲಸಚಿವರು)
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು